**ಒ.ಎಸ್.ನಂಬ್ರ: 146/2023 ಪಿ.ಡಬ್ಲ್ಯೂ : 1**

ದಿನಾಂಕ: 16-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ. ಎನ್ ಎಸ್ ಆರ್ ಬಿ ವಕೀಲರಿಂದ**

ನಾನು ಹಾಜರುಪಡಿಸಿರುವ ದಾಖಲೆಗಳು ಕನ್ನಡದಲ್ಲಿವೆ ಎಂದರೆ ಸರಿ. ನಿಪಿ 1 ರ ಪ್ರಕಾರ ಸರ್ವೇ ನಂ 51/9 ಎ ನ ವಿಸ್ತೀರ್ಣ 63 ಸೆಂಟ್ಸ್ ಎಂದರೆ ಸರಿ . ಅದು ನಂತರದಲ್ಲಿ ಸರ್ವೇ ನಂ 51/9 ಎ ಚಂದ್ರಶೇಖರ್ ಶೆಟ್ಟಿ ರವರ ಹೆಸರಿನಲ್ಲಿ ಕೇವಲ 30 ಸೆಂಟ್ಸ್ ಉಳಿದಿತ್ತು ಎಂದರೆ ಸರಿ . ನಿಪಿ 1 ಪ್ರಕಾರ ಒಟ್ಟು ವಿಸ್ತೀರ್ಣವಾದ 63 ಸೆಂಟ್ಸ್ ನಲ್ಲಿ ರಾಜೀವ ಶೆಟ್ಟಿ ಒಬ್ಬ ಹಕ್ಕುದಾರರು ಎಂದರೆ ಸರಿ. ನಿಪಿ-1 ರ ಪಹಣಿಯಲ್ಲಿ ಗುಲಾಬಿ ಶೆಡ್ತಿ , ಶೀನಪ್ಪ ಹೆಗ್ಡೆ ಮತ್ತು ರಾಜೀವ ಶೆಟ್ಟಿ ರವರ ಹೆಸರು ಕಂಡುಬರುತ್ತದೆ ಎಂದರೆ ಸರಿ. ಸರ್ವೇ ನಂ 51/9 ಎಪಿ1 ರಲ್ಲಿ 3 ಸೆಂಟ್ಸ್ , ಸರ್ವೇ ನಂ 51/9 ಎಪಿ 3 ರಲ್ಲಿ 27 ಸೆಂಟ್ಸ್ ಗೆ ಕಾಸೀಂ ಸಾಹೇಬರ ಹೆಸರಿನಲ್ಲಿ ಪಹಣಿ ಆಗಿದೆ ಎಂದರೆ ಸರಿ. ಸರ್ವೇ ನಂ 51/9 ಎಪಿ 3 ರ ಪಹಣಿ ಎಂದೂ ಕೂಡ ಚಂದ್ರಶೇಖರ್ ಶೆಟ್ಟಿ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ನಿಪಿ 2 ಪ್ರಕಾರ ನಮ್ಮ ದಾವಾ ಸ್ವತ್ತು ಯಾವುದು ಎಂದು ಗುರುತಿಸಲು ಸಾಧ್ಯವಿಲ್ಲ . ನಿಪಿ 3 63 ಸೆಂಟ್ಸ್ ಒಟ್ಟು ವಿಸ್ತೀರ್ಣ ದ ಎಫ್ ಎಂ ಬಿ ನಕ್ಷೆಯಾಗಿರುತ್ತದೆ . ನಿಪಿ 4 ರಂತೆ 1978-79 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ 1985-86 ಇಸವಿಯಲ್ಲಿ ಸರ್ವೇ ನಂ 51/9 ರ 30 ಸೆಂಟ್ಸ್ ಗೆ ಮಾತ್ರ ಪಹಣಿಗೆ ಆದೇಶವಾಗಿರುತ್ತದೆ ಎಂದರೆ ಸರಿ . ನಿಪಿ 5 ರ ಆದೇಶದ ಪ್ರಕಾರ ಪ್ರತಿವಾದಿಯ ತಂದೆಗೆ ಪಹಣಿ ಬದಲಾವಣೆ 27 ಸೆಂಟ್ಸ್ ಗೆ ಆಗಿರುತ್ತದೆ ಎಂದರೆ ಸರಿ . ನಿಪಿ 6 ರ ಪ್ರಕಾರ ವ್ಯವಸ್ಥಾಪತ್ರದ ಆದಾರದಲ್ಲಿ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ನಿಪಿ 9 ರ ಪ್ರಕಾರ 2022-23 ರ ಸಾಲಿನಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಸರ್ವೇ ನಂ 51/9 ರಲ್ಲಿ 27 ಸೆಂಟ್ಸ್ ಪ್ರತಿವಾದಿ ಯ ಹೆಸರಿನಲ್ಲಿ ಪಹಣಿ ದಾಖಲಾಗಿದೆ ಎಂದರೆ ಸರಿ. 2009-10 ರ ಸಾಲಿನಲ್ಲಿ ನಾವು ಸಲ್ಲಿಸಿದ ಅರ್ಜಿಯಂತೆ 3 ಸೆಂಟ್ಸ್ ನ ಕುರಿತು ನಮ್ಮ ತಂದೆ ಪವತಿ ನಂತರ ನಮ್ಮ ತಾಯಿಯ ಹೆಸರಿಗೆ ಪಹಣಿ ಬದಲಾವಣೆ ಯಾಗಿರುತ್ತದೆ ಎಂದರೆ ಸರಿ.

ನಮ್ಮ ತಂದೆ ಸುಮಾರು 32 ವರ್ಷಗಳ ಹಿಂದೆ ಪವತಿಯಾಗಿರುತ್ತಾರೆ. 2009-10 ರ ಸಾಲಿನಲ್ಲಿ ಪಹಣಿ ಬದಲಾವಣೆಗಾಗಿ ವಾದಿ ಅರ್ಜಿ ಸಲ್ಲಿಸಿದ್ದರು. ಆಗ ಆದ ಆದೇಶವನ್ನು ಆಗಲೇ ನೋಡಿರುತ್ತೇನೆ. 2009-10 ರ ಪಹಣಿ ಬದಲಾವಣೆ ನಂತರ ಅದರ ತಪ್ಪು ನೊಂದಣಿ ಬಗ್ಗೆ ಕ್ರಮ ಜರುಗಿಸಿರುವ ಬಗ್ಗೆ ನನಗೆ ಸರಿ ಮಾಹಿತಿ ಇಲ್ಲ . ನಾನು ಮತ್ತು ವಾದಿ ಅನ್ಯೋನ್ಯವಾಗಿದ್ದೇವೆ . ನಿಪಿ 10 ರಂತೆ ಆದ ಪಹಣಿ ಬದಲಾವಣೆ ಕುರಿತು ವಾದಿ ಆಗಲೇ ಮಾಹಿತಿ ನೀಡಿದ್ದರು ಎಂದರೆ ನನಗೆ

ನೆನಪಿಲ್ಲ. 2021-22 ರ ಸಾಲಿನಲ್ಲಿ ಆದ ಪೋಡಿ ಪ್ರಕ್ರಿಯೆಗೆ ಆಕ್ಷೇಪ ಸಲ್ಲಿಸಿದ್ದೇವೆ . ಸರ್ವೇ ನಂ.51/9 ಪೋಡಿ ಪ್ರಕ್ರಿಯೆ ನಂತರ ಸರ್ವೇ ನಂ 51/55 ಆಗಿರುತ್ತದೆ ಎಂದರೆ ಸರಿ. ಮೊದಲಿನಿಂದ ಪಹಣಿಯಲ್ಲಿ ರಾಜೀವ ಶೆಟ್ಟಿ ದಾಖಲಾಗಿದ್ದು ಯಾವ ಆದಾರದಲ್ಲಿ ಕಂಡುಬರುತ್ತದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ರಾಜೀವ ಹೆಗ್ಡೆ ರವರ ತಾಯಿ ಪುಟ್ಟಮ್ಮ ಹೆಗ್ಡೆ ಎಂದರೆ ಸರಿ. ಪುಟ್ಟಮ್ಮ ಹೆಗ್ಗಡ್ತಿ ರವರು ರಾಜೀವ ಹೆಗ್ಡೆ ರವರಿಗೆ ದಿಃ 15-10-1956 ರಂದು ಮಾಡಿಕೊಟ್ಟ ಕ್ರಯಪತ್ರ ದ ಪ್ರಕಾರ ಸರ್ವೇ ನಂ.51/9 ರಲ್ಲಿನ ಪೂರ್ವದ 27 ಸೆಂಟ್ಸ್ ಕ್ರಯ ಮಾಡಿರುವುದು ಕಂಡುಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರಾಜೀವ ಹೆಗ್ಡೆ ರವರು ದಿಃ 25-02-1975 ರಲ್ಲಿ ಸರ್ವೇ ನಂ.51/9 ರ 27 ಸೆಂಟ್ಸ್ ನ್ನು ಇತರೇ ಸ್ವತ್ತುಗಳೊಂದಿಗೆ ಪ್ರತಿವಾದಿಯ ತಂದೆ ಖಾಸೀಂ ಸಾಹೇಬರವರಿಗೆ ಕ್ರಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 27-01-2000 ರಲ್ಲಿ ಪ್ರತಿವಾದಿಯ ಹೆಸರಿಗೆ ಆತನ ತಂದೆ ನೊಂದಾಯಿತ ವ್ಯವಸ್ಥಾ ಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .ಈ ಎಲ್ಲಾ ದಾಖಲೆಗಳ ಪ್ರಕಾರ ಸರ್ವೇ ನಂ 51/9 ರ ಪೂರ್ವಂಶದ 27 ಸೆಂಟ್ಸ್ ಎಂದು ಕಂಡುಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ 51/9 ರಲ್ಲಿ ಯಾವ ಅಂಶ ನಮ್ಮ ತಂದೆಗೆ ಸೇರಿದ 36 ಸೆಂಟ್ಸ್ ಎಂದು ಗುರುತಿಸಲಾಗಿಲ್ಲ ಎಂದರೆ ಸರಿ .ನಮ್ಮ ತಂದೆಯ ಹೆಸರಿನಲ್ಲಿ 36 ಸೆಂಟ್ಸ್ ಆದ ಕಾರಣ ದಾಖಲೆಯಲ್ಲಿ ಕಂಡುಬರುವುದಿಲ್ಲ ಎಂದರೆ ಸರಿ.

ಈಗ ಪ್ರಸ್ತುತ ಮೂಲ ಸರ್ವೇ ನಂ 51/9 ರ ಒಟ್ಟು ವಿಸ್ತೀರ್ಣದ ಹಕ್ಕುದಾರರುಗಳೆಂದರೆ ನಮ್ಮ ತಂದೆ ಚಂದ್ರ ಶೇಖರ ಶೆಟ್ಟಿ , ಲಚ್ಚಮ್ಮ ಶೆಡ್ತಿ ಮತ್ತು ಪ್ರತಿವಾದಿ .ಲಚ್ಚಮ್ಮ ಶೆಡ್ತಿ ನನ್ನ ತಂದೆಯ ಸಂಬಂಧಿಕರಲ್ಲ .ನಮ್ಮ ಪ್ರಕಾರ ವಾದಿ ಮತ್ತು ಮಕ್ಕಳು ಈಗ 30 ಸೆಂಟ್ಸ್ ನ ಹಕ್ಕುದಾರರು. ಪ್ರತಿವಾದಿ 27 ಸೆಂಟ್ಸ್ ನ ಹಕ್ಕುದಾರರು ಎಂದರೆ ಆಗಿರಬಹುದು ನನಗೆ ಗೊತ್ತಿಲ್ಲ. ಲಚ್ಚಮ್ಮ ಶೆಡ್ತಿ ಎಷ್ಟು ವಿಸ್ತೀರ್ಣದ ಹಕ್ಕುದಾರರು ಎಂದು ನನಗೆ ತಿಳಿದಿಲ್ಲ . ಲಚ್ಚಮ್ಮ ಶೆಡ್ತಿ ಗೆ ಸಂಬಂದಿಸಿದ ವಿಸ್ತೀರ್ಣದ ಸ್ವತ್ತಿನ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ಆದ ಕಾರಣ ಆಕೆಗೆ ಸರ್ವೇ ನಂ 51/9 ರಲ್ಲಿ ಯಾವುದೇ ಹಕ್ಕು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ .

ನಾನು ಮತ್ತು ವಾದಿ ಸೇರಿ ದಿಃ 10-01-2017 ರಂದು ಪ್ರತಿವಾದಿಗೆ ಸೇರಿದ ಸ್ವತ್ತಿನಲ್ಲಿ ಬೆಳೆಸಿದ ಅಡಿಕೆ ಸಸಿಗಳನ್ನು ತೆಗೆದು ನಾಶಪಡಿಸಿರುವುದಾಗಿ ದೂರು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ನನ್ನನ್ನು ವಿಚಾರಣೆ ಮಾಡಿಲ್ಲದೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ . ನನ್ನ ಮೇಲೆ OS 67/2017 ರಂತೆ ದಾವೆ ಸಲ್ಲಿಸಿ ಮಧ್ಯಂತರ ಆದೇಶವಾಗಿತ್ತು ಎಂದರೆ ಸರಿ . ಸದರಿ ಆದೇಶ ಈಗಲೂ ಜಾರಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಿಳಂಭವಾಗಿರುತ್ತಿರುವ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ . ಈ ದಾವೆಯಲ್ಲಿ ಸದರಿ ದಾವೆಯ ಮಧ್ಯಂತರ ಆದೇಶದ ಬಗ್ಗೆ ಮಾಹಿತಿ ನೀಡದೆ ಇರಲು ಯಾವುದೇ ವಿಶೇಷ ಕಾರಣ ಇಲ್ಲ . ಸರ್ವೇ ನಂ 51/9 ರಲ್ಲಿ ಪೂರ್ವಂಶ ದ 27 ಸೆಂಟ್ಸ್ ನ್ನು 1975 ರ ದಾಖಲೆಯಂತೆ ಪ್ರತಿವಾದಿ ಮತ್ತು ಆತನ ತಂದೆ ಸ್ವಾಧೀನತೆಯಿಂದ ಅನುಭವಿಸುತ್ತಿದ್ದಾರೆ

ಎಂದರೆ ಸರಿಯಲ್ಲ . OS 67/2017 ರ ಮಧ್ಯಂತರ ಆದೇಶದ ಯಾವುದೇ ಉಲ್ಲಂಘನೆ ಮಾಡಿಲ್ಲ . ಸರ್ವೇ ನಂ 51/9 ಪೂರ್ವಂಶ ದ 27 ಸೆಂಟ್ಸ್ ಗೆ ಪ್ರತಿವಾದಿ ಮತ್ತು ಆತನ ತಂದೆ 1975 ರಿಂದ ಈಗಿನ ವರೆಗೂ ತೀರ್ವೆ ಪಾವತಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಈವರೆಗೂ ದಾವಾ ಸ್ವತ್ತಿನ ಯಾವುದೇ ತೀರ್ವೆ ಯನ್ನು ನೀವು ಪಾವತಿಸಿಲ್ಲ ಎಂದರೆ ಸಾಕ್ಷಿಯು 30 ಸೆಂಟ್ಸ್ ಒಟ್ಟಾಗಿ ಇದ್ದಾಗ ಪಾವತಿಸಿದ್ದು 27 ಸೆಂಟ್ಸ್ ಪ್ರತ್ಯೇಕವಾದ ನಂತರ ಪಾವತಿಸಿಲ್ಲ .ಅದಕ್ಕೆ ಸಂಬಂದಿತ ದಾಖಲೆಗಳು ಇರುವ ಬಗ್ಗೆ ಮಾಹಿತಿ ಇಲ್ಲ . ಆದ್ದರಿಂದ ಸದರಿ ದಾಖಲೆಗಳನ್ನು ಹಾಜರುಪಡಿಸಬಹುದಾ ಎಂದು ತಿಳಿದಿಲ್ಲ .ಸರ್ವೇ ನಂ 51/9 ಪೂರ್ವಂಶ ದ 27 ಸೆಂಟ್ಸ್ ನ ಹದ್ದು ಬಸ್ತಿಗಾಗಿ ನಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅನಾವಶ್ಯಕವಾಗಿ ಅಡಚಣೆ ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು

ನ್ಯಾಯಾಲಯದಲ್ಲಿ ಇತ್ಯರ್ಥ ಬಾಕಿ ಇರುವ ಕಾರಣ ನಾನು ಆಕ್ಷೇಪ ಸಲ್ಲಿಸಿರುತ್ತೇನೆ ಎಂದು ಉತ್ತರಿಸಿರುತ್ತೇನೆ . ಈ ದಾವೆಯಲ್ಲಿನಮ್ಮ ಪರವಾಗಿ ಯಾವುದೇ ಮಧ್ಯಂತರ ಆದೇಶವಾಗಿಲ್ಲ ಎಂದರೆ ಸರಿ . ಆದರೂ ದಿಃ 18-03-2023 ರಂದು ಪ್ರತಿವಾದಿಯ ಸ್ವಾಧೀನ ಇರುವ ಅಂಶಕ್ಕೆ ತೊಂದರೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಹಕ್ಕು ಇರುವ ಕಾರಣ ಅಳತೆ ಮಾಡಬಾರದು ಎಂದು ಆಕ್ಷೇಪ ಪತ್ರ ಸಲ್ಲಿಸಿರುದಾಗಿ ಉತ್ತರಿಸಿರುತ್ತಾರೆ . ಆದರೂ ಅಳತೆ ಬಂದಾಗ ಆಕ್ಷೇಪ ಮಾಡಿರುತ್ತೇನೆ ಎಂದರೆ ಸರಿಯಲ್ಲ .ಈಗ ಅಡಿಕೆ ಮತ್ತು ಪಪ್ಪಾಯಿ ಗಿಡಿ ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ ಕಾರಣ ನಾನು ಕುಂದಾಪುರದಲ್ಲಿ ವಾಸವಾಗಿದ್ದು ಯಾವಾಗಲೂ ದಾವಾ ಸ್ಥಳಕ್ಕೆ ಭೇಟಿ ನೀಡುವುದಿಲ್ಲ . ವಾದಿಗೆ ವಯಸ್ಸಾಗಿದ್ದು ಅವರಿಗೆ ನೋಡಿಕೊಳ್ಳಲು ಆಗುವುದಿಲ್ಲ .ನಾವು ಅನಾವಶ್ಯಕವಾಗಿ ಪ್ರತಿವಾದಿಗೆ ತೊಂದರೆ ನೀಡುತ್ತಿರುವ ಕಾರಣ ಆತ ನಮ್ಮ ವಿರುದ್ಧ ಶಾಶ್ವತ ನಿರ್ಬಂದಕಾಜ್ಞೆ ಕೋರಿದ್ದಾರೆ ಎಂದರೆ ಸರಿಯಲ್ಲ . 1975 ರಿಂದ ಪ್ರತಿವಾದಿಮತ್ತು ಆತನ ತಂದೆಗೆ 27 ಸೆಂಟ್ಸ್ ನ ಸ್ವಾಧೀನ ಇದ್ದು ಅವರೇ ಹಕ್ಕುದಾರರಾಗಿರುವ ಕಾರಣ ನಮಗೆ ಸದರಿ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ .

ಸರ್ವೇ ನಂ 51/9 ರ ಪಶ್ಚಿಮಾಂಶ ಯಾರ ಸ್ವಾಧೀನದಲ್ಲಿದೆ ಎಂದು ನನಗೆ ತಿಳಿದಿಲ್ಲ . ಆದ್ದರಿಂದ ನಮ್ಮ ಅಂಶ ದ ಸ್ಥಳ ಯಾವುದು ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ . ಆದ ಕಾರಣ ದಾವಾ ಸ್ವತ್ತಿನ ಗಡಿಗಳನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಆ ಕಾಲಕ್ಕೆ ಗಡಿಗಳು ಗುರುತಾಗಿರಲಿಲ್ಲ ಎಂದು ಉತ್ತರಿಸಿರುತ್ತಾರೆ . ಅಂದರೆ ಮಾರ್ಚ್ 2023 ರಲ್ಲಿ ಗಡಿಗಳ ಗುರುತು ನಾನು ಆಕ್ಷೇಪಿಸಿದ ಮೇಲೂ ಆಗಿರುತ್ತದೆ . ಆನಂತರವೂ ಸದರಿ ಗಡಿಗಳನ್ನು ವಾದಪತ್ರದಲ್ಲಿ ಸೇರಿಸಿಲ್ಲ . ಹಾಗೇ ಸೇರಿಸದೇ ಇರಲು ಯಾವುದೇ ಕಾರಣವಿಲ್ಲ ಎಂದರೆ ಸರಿ . ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ದುರುದ್ದೇಶ ದಿಂದ ಈ ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ . ಆದ್ದರಿಂದ ಈ ದಾವೆಯಲ್ಲಿ ಕೋರಿರುವ ಯಾವುದೇ ನಿವೃತ್ತಿಗೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**